ಗ್ರಾಚ್ಯೂಟಿ ಪಾವತಿಸುವ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 18ರ ಅಧೀನಕ್ಕೆ ಒಳಪಟ್ಟಿರುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಆರ್ಥಿಕ ಮಟ್ಟವನ್ನು ಸುಧಾರಿಸಲು ಹಲವಾರು ಯೋಜನೆಗಳನ್ನು ರಚಿಸಲಾಗಿದೆ.

ತೀರ್ಥಹಳ್ಳಿ ತಾಲ್ಲೂಕಿನ ಹೆಗ್ಗಾರುಘಟ್ಟ ಪ್ರದೇಶದ ಭೂ ಪ್ರದೇಶದ ಬಗ್ಗೆ ಸಾರ್ವಜನಿಕರ ಚಳುವಳಿ.

1279-ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ತಾಲ್ಲೂಕಿನ ಹೆಗ್ಗಾರುಘಟ್ಟ ಪ್ರದೇಶದ 1081 ಎಕರೆ ಭೂ ಪ್ರದೇಶದ ಬಗ್ಗೆ ಸಾರ್ವಜನಿಕ ಚಳುವಳಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಭೂಮಿಯ ಒಡೆತನದ ಬಗ್ಗೆಯೇ ವಿವಾದವಿರುವಾಗ ಭೂ ನ್ಯಾಯ ಮಂಡಳಿಯಲ್ಲಿ ಈ ಜಮೀನನ್ನು ಕೆಲವರಿಗೆ ಮಂಜೂರು ಮಾಡಲಾಗಿರುವುದು ಕೆಲವೊಂದು ಸರ್ವೆ ನಂಬರಗಳ ಪಹಣಿ ಪತ್ರಿಕೆಯಲ್ಲಿ ಅಕ್ರಮ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ಕೈಗೊಳ್ಳಲಾಗಿರುವ ಕ್ರಮಗಳೇನು?

ಈ) ಈ ಭೂ ಪ್ರದೇಶದ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್.ಎಲ್.ಜಾಲಪ್ಪ (ಕಂದಾಯ ಸಚಿವರು):

ಅ) ಹೌದು.

ಆ) ಹೌದು. ಈ ಕೆಳಕಂಡ ಜಮೀನುಗಳ ಬಾಬ್ತು ತೀರ್ಥಹಳ್ಳಿ ಭೂ ನ್ಯಾಯ ಮಂಡಳಿಯು ಜಮೀನನ್ನು ಕೆಲವರಿಗೆ ಮಂಜುರು ಮಾಡಿದೆ.

ಗ್ರಾಮ	ಸ.ನಂ.	ಮಂಜೂರಾದ ವಿಸ್ತೀರ್ಣ
ಬೆಕ್ಕಕಂಚಿಗುಡ್ಡೆ	13	ತಲಾ ಇಬ್ಬರಿಗೆ 20 ಗುಂಟೆಯಂತೆ 1-00 ಎಕರೆ ಮಂಜುರಾಗಿರುತ್ತದೆ.
ದಬ್ಬಣಗದ್ದೆ	84:1	10 ಎಕರೆ ಮಂಜೂರು ಮಾಡಿದೆ (ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ).

ಪಹಣಿ ಪತ್ರಿಕೆಯಲ್ಲಿ ಕಲಂ 9ರಲ್ಲಿ 'ಭೀಮನಕಟ್ಟೆ ಮಠ' ಎಂದು ನಮೂದಾಗಿದ್ದು ಕಾಲಂ 12ರಲ್ಲಿ "ಪ್ಲಾಂಟೇಷನ್" ಎಂದು ಈ ಕೆಳಕಂಡ ಸರ್ವೆ ನಂ.ಗಳ ಬಗ್ಗೆ ಅಕ್ರಮವಾಗಿ ನಮುದಾವಣೆ ಮಾಡಿರುವುದು ಗಮನಕ್ಕೆ ಬಂದಿದ್ದು, ಉಪ ವಿಭಾಗಾಧಿಕಾರಿಗಳ ಸೂಚನೆ ಪ್ರಕಾರ ತೀರ್ಥಹಳ್ಳಿ ತಹಶೀಲ್ದಾರರು ತಮ್ಮ ಆದೇಶ ಆರ್ಡಿ:ಸಿಆರ್.261:94-95 ದಿನಾಂಕ 13-12-94ರಂದು ರದ್ದುಪಡಿಸಿರುತ್ತಾರೆ.

ಗ್ರಾಮ	ಸ.ನಂ.	ವಿಸ್ತೀರ್ಣ
ಬೆಕ್ಸಕಂಚಿಗುಡ್ಡೆ	12	14-27
	13	446-37
	25	26-00
	95	45-25
ದಬ್ಬಣಗಡ್ಡೆ	40	12-05
	46	17-25
	84:1	142-35
	84:2	5-14
	84:3	70:09
	102	35-05
	214	06-24
ಹಾಲುಮಹಿಷಿ	9	35-35
	16	93-07

೨) ಪಹಣಿ ಪತ್ರಿಕೆಯಲ್ಲಿನ ಅಕ್ರಮ ನಮೂದಾವಣೆಗಳನ್ನು ರದ್ದುಪಡಿಸಲಾಗಿದೆ.

೩) ಈ ಜಮೀನು ಸಾಗುವಳಿ ಲಾಯಕ್ಕಲ್ಲದ ಬಹುಪಾಲು ದಟ್ಟ ಮರಗಳಿಂದ ಕೂಡಿದ ಕಾನು ಸ್ವಭಾವದ ಜಮೀನಾಗಿದ್ದು ಅರಣ್ಯ ಉಪಯೋಗಕ್ಕೆ ಲಾಯಕ್ಕಿದೆ. ಕರ್ನಾಟಕ ಭೂ ಸುಧಾರಣ ಕಾಯಿದೆ 79 ಬಿ ಪ್ರಕಾರ "ಭೀಮಸೇತು ಮುನಿವೈಂದ ಮಠ" ಭೀಮನಕಟ್ಟೆ ತೀರ್ಥಹಳ್ಳಿರವರು ಸಲ್ಲಿಸಿದ ಘೋಷಣಾ ಪತ್ರದ ಬಗ್ಗೆ ಜಮೀನನ್ನು ಸರ್ಕಾರದಲ್ಲಿ ನಿಹಿತಗೊಳಿಸಿ ವಿಶೇಷ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಇವರು ದಿ: 22-12-85ರಲ್ಲಿ, ಆದೇಶಿಸಿದ್ದು, ಈ ಆದೇಶವನ್ನು ಸದರಿ ಮಠದವರು ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಪ್ರಶ್ನಿಸಿ, ಪ್ರಾಧಿಕಾರಿವು ಪ್ರಕರಣವನ್ನು ಮರು ಪರಿಶೀಲನೆಗೆ, ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದು, ಆ ಬಗ್ಗೆ ವಿವರವಾದ ಪರಿಶೀಲನೆ ನಡೆಸಿ ಆದೇಶ ಹೊರಡಿಸಬೇಕಾಗಿದೆ. ಈ ನಡುವೆ ಹೆಗ್ಗಾರುಘಟ್ಟ ಚಳುವಳಿಗಾರರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಶಿವಮೊಗ್ಗ ಉಪ ವಿಭಾಗಾಧಿಕಾರಿಗಳನ್ನು ಸಮಸ್ಯೆಯ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ರೆವಿನ್ಯೂ ಮತ್ತು ಭೂ ಪರಿಶೀಲನೆ ನಡೆಸಿ ವಿವರವಾದ ವರದಿ ನೀಡಲು ಕೋರಲಾಗಿದೆ. ಅವರು ವಿಚಾರಣೆಯನ್ನು ಕೈಗತ್ತಿಕೊಂಡಿರುತ್ತಾರೆ. ವರದಿ ಬಂದ ನಂತರ ಭೂ ಸುಧಾರಣೆ ಕಾಯ್ದೆಯಡಿಯಲ್ಲಿ ಸದ್ರಿ ಜಮೀನಿನ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.